ಕನ್ನಡಿಗರ ಮನದಲ್ಲಿ ‘ಅಭಿನಯ ಸರಸ್ವತಿ’ ಎಂದೇ ಮನೆಮಾತಾಗಿದ್ದ ಬಿ. ಸರೋಜಾದೇವಿ ಅವರದ್ದು, ಪಾತ್ರಗಳ ಹೊರತಾಗಿಯೂ ನಮ್ಮೊಂದಿಗೆ ಸದಾ ಉಳಿಯುವ ವ್ಯಕ್ತಿತ್ವ. ಸುಮಾರು 70 ವರ್ಷಗಳ ಕಾಲ ಚಿತ್ರರಂಗದಲ್ಲಿ ಗುರುತಿಸಿಕೊಂಡಿದ್ದ ಅವರು, ಬಹುಭಾಷಾ ಚಿತ್ರರಂಗದಲ್ಲೂ ಬಹುಬೇಡಿಕೆ ಗಳಿಸಿದ್ದ ಕನ್ನಡದ ಅಪೂರ್ವ ನಟಿ. ತಮ್ಮ ಮನೋಜ್ಞ ಅಭಿನಯದ ಮೂಲಕ ಚಂದನವನವನ್ನು ದಟ್ಟವಾಗಿ ಆವರಿಸಿದ್ದ ಸರೋಜಮ್ಮ, ಒಂದು ಕಾಲದಲ್ಲಿ ತಮಿಳು ಚಿತ್ರರಂಗಕ್ಕೆ ‘ಕನ್ನಡದ ಗಿಳಿ’ಯಾಗಿದ್ದವರು. ನಾಡಿನ ಸಿನಿಪ್ರಿಯರ ಹೃದಯದಲ್ಲಿ ಚಿರಕಾಲ ಉಳಿಯುವ ಈ ‘ಗಿಳಿ’, ಈಗ ಬದುಕಿನ ನಟನೆ ಮುಗಿಸಿ ಅನಂತದೆಡೆಗೆ ಸಾಗಿದೆ. ಅಪೂರ್ವ ಕಲಾವಿದೆಗೆ ಇದು ‘ಸುಧಾ’ ನುಡಿನಮನ. ನಮ್ಮ ಈ ಪ್ರಯತ್ನಕ್ಕೆ ನಟಿ ಜಯಮಾಲಾ, ತಾರಾ ಅನುರಾಧಾ ಸಹ ಜೊತೆಗೂಡಿದ್ದಾರೆ.

# ನಾನೇ ಭಾಗ್ಯವತಿ...

## ಬಿ. ಸರೋಜಾದೇವಿ





